ಒ. ಎಸ್. ನಂ. 321/2014

ಪಿಡಬ್ಲೂ-1

ದಿನಾಂಕಃ 23.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ಪ್ರತಿವಾದಿ 2 ರವರು ಸರ್ವೆ ನಂಬರ್ 6/4 ರಲ್ಲಿ 2 ಎಕರೆ ಜಮೀನನ್ನು ವಿಜಯಲಕ್ಷ್ಮಿ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ವಿಷಯ ಈಗ್ಗೆ 1 ½ ತಿಂಗಳ ಹಿಂದೆ ಗೊತ್ತಾಗಿರುತ್ತದೆ. ಸರ್ವೆ ನಂಬರ್ 6/4 ರ ಪಶ್ಚಿಮದ ಕಡೆ ನನ್ನ ಜಮೀನು ಬರುತ್ತದೆ. ನಿಪಿ 26 ರ ಶೆಡ್ಯೂಲ್ ನ ಯಾವಾ ದಿಕ್ಕಿಗೆ ನನ್ನ ಜಮೀನು ಬರುತ್ತದೆ ಎಂದು ನಮೂದಿಸಿಲ್ಲ ಎಂದರೆ ಪಶ್ಚಿಮ ಕಡೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 5 ರಲ್ಲಿ ಪ್ರತಿವಾದಿ 2 ರವರಿಗೆ 3 ಎಕರೆ ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 6/4 ರ ದಕ್ಷಿಣಕ್ಕೆ ರಾಮೇಗೌಡರ ಜಮೀನು ಬರುತ್ತದೆ. ಸದರಿ ದಿಕ್ಕಿಗೆ ಸಿದ್ದರಾಜು ರವರು ಜಮೀನು ಬರುವುದಿಲ್ಲ ಎಂದರೆ ಸರಿ. ನಿಪಿ 27 ರ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ದಾವೆ ಸಲ್ಲಿಸಿದ ನಂತರ ಅಥವಾ ಮುಂದೆ ದಾವಾ ಸ್ವತ್ತನ್ನು ಅಳತೆ ಮಾಡಿಸಿದ್ದೀರಾ ಎಂದರೆ ಅಳತೆ ಮಾಡಿಸಿ ದಾಖಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ನಿಯೋಗಿಯ ಮುಖಾಂತರ ದಾವಾ ಸ್ವತ್ತನ್ನು ಅಳತೆ ಮಾಡಿಸಲು ತೊಂದರೆ ಇಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೆ ಇರುವುದರಿಂದ ಪ್ರತಿವಾದಿಗಳು ತೊಂದರೆ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ**